**1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

ಸ್ಪೆಷಲ್ ಮೊಕದ್ದಮೆ ನಂಃ 71/2023

| | | |
|---|---|---|
| ಸಾಕ್ಷಿದಾರರ ಹೆಸರು | - ರಂಗನಾಥ ಬಿ.ಹೆಚ್. | ಪಿಡಬ್ಲೂ - 01 |
| ತಂದೆಯ ಹೆಸರು | - ಹನುಮಂತಪ್ಪ | ಸಿಡಬ್ಲೂ - 01 |
| ವಯಸ್ಸು | - 43 ವರ್ಷ | |
| ಉದ್ಯೋಗ | - ವೈದ್ಯ | |
| ವಾಸ ಸ್ಥಳ | - ಬಳ್ಳಾವರ | |

ದಿನಾಂಕಃ 30.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ 5 ನೇ ಆರೋಪಿ ಗೊತ್ತು, ಆತ ನಮ್ಮ ಪಕ್ಕದ ಊರಿನವನು. ಚಾಸಾ.2 ರಿಂದ ಚಾಸಾ.12 ಗೊತ್ತು. ನಾನು ಪರಿಶಿಷ್ಟ ಜಾತಿಯ ಬೋವಿ ಜನಾಂಗಕ್ಕೆ ಸೇರಿದವನು. 5 ನೇ ಆರೋಪಿ ಯಾವ ಜಾತಿಗೆ ಸೇರಿದವನು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆರೋಪಿಯ ಜಾತಿ ತಮಿಳ್ ಗೌಂಡರ್ ಇರಬಹುದು ಎನ್ನುತ್ತಾರೆ.

2. ನಾನು ಈಗ್ಗೆ 15 ವರ್ಷಗಳಿಂದ ಬಳ್ಳಾವರ ಗ್ರಾಮದಲ್ಲಿ ಚೇತನ್ ಕ್ಲಿನಿಕ್ ಎಂಬ ಹೆಸರಿನಲ್ಲಿ ವೈದ್ಯ ವೃತ್ತಿ ನಡೆಸುತ್ತಿದ್ದೇನೆ. ದಿಃ 02-04-2023 ರಂದು ರಾತ್ರಿ 8.30 ಗಂಟೆಗೆ ನಾನು ತರೀಕೆರೆಯಲ್ಲಿರುವ ಮಯೂರ ಹೋಟೆಲ್ ನಲ್ಲಿದ್ದೆನು. ಆಗ ನನಗೆ ಚಾಸಾ.12 ಅನಿಲ್ ಮಥಿಯಾಸ್ ಆಲಿಯಾಸ್ ಅಲ್ವೀನ್ ರವರು ನನಗೆ ಫೋನ್ ಮಾಡಿ ನನ್ನ ಕ್ಲಿನಿಕ್ ಗೆ ಬೆಂಕಿ ಬಿದ್ದು ಹತ್ತಿ ಉರಿಯುತ್ತಿದೆ ಎಂದು ತಿಳಿಸಿದರು.

ಆ ಸಮಯದಲ್ಲಿ ನನ್ನೊಂದಿಗೆ ಚಾಸಾ.5 ಏಸು ಮಥಿಯಾಸ್ ಮತ್ತು ಚಾಸಾ.10 ಪುನಿತ್ ರವರು ಇದ್ದರು. ಆ ರೀತಿ ನನಗೆ ಕರೆ ಬಂದಾಗ ಸಮಯ ಸುಮಾರು ರಾತ್ರಿ 8.40 ಗಂಟೆಯಾಗಿತ್ತು.

3. ನಂತರ ನಾನು ಅಲ್ಲಿಂದ ನನ್ನ ಕಾರಿನಲ್ಲಿ ಹೊರಟು ನನ್ನ ಕ್ಲಿನಿಕ್ ಹತ್ತಿರ ಬಂದೆನು. ಆಗ ಸಮಯ ರಾತ್ರಿ 9.30 ಗಂಟೆಯಾಗಿತ್ತು. ನನ್ನ ಕ್ಲಿನಿಕ್ ಬಳಿ ಹಲವು ಜನರು ಸೇರಿದ್ದರು, ಚಾಸಾ.7 ಹನುಮಂತ, ಚಾಸಾ.8 ಮೀನಶಿರ್, ಚಾಸಾ.3 ಜಸ್ವಂತ್ ಮತ್ತು ಚಾಸಾ.11 ಅಬ್ಬುಬಕರ್ ರವರು ಬೆಂಕಿಯನ್ನು ಆರಿಸುತ್ತಿದ್ದರು.

4. ನಾನು ಗಂಧದಗುಡಿ ಸೇವಾ ಸಂಘ ಎಂಬ ನೊಂದಾಯಿತ ಸಂಘವನ್ನು ನಡೆಸುತ್ತಿದ್ದೇನೆ, ಅದರಲ್ಲಿ 21 ಜನ ಸದಸ್ಯರು ಇದ್ದಾರೆ. ಸದರಿ ಸಂಘದ ಸದಸ್ಯರು ಕಟ್ಟೆಹೊಳೆ ಎಸ್ಟೇಟಿನ ಖಾಸಗಿ ಮಾರ್ಗದಲ್ಲಿ ಹೆಬ್ಬೆ ಜಲಪಾತಕ್ಕೆ  ವಾಹನಗಳನ್ನು ಓಡಿಸುತ್ತಿದ್ದರು. ಸದರಿಯವರು ಪ್ರವಾಸಿಗರನ್ನು ಜಲಪಾತಕ್ಕೆ ಬಾಡಿಗೆಗೆ ಕರೆದುಕೊಂಡು ಹೋಗುತ್ತಿದ್ದರು. ಅದೇ ರೀತಿ ಅರಣ್ಯ ಇಲಾಖೆಯ ಅದೀನದಲ್ಲಿ ಕೆಲವರು ವಾಹನಗಳಲ್ಲಿ ಪ್ರವಾಸಿಗರನ್ನು ಸದರಿ ಜಲಪಾತಕ್ಕೆ ಬಾಡಿಗೆಗೆ ಕರೆದುಕೊಂಡು ಹೋಗುತ್ತಿದ್ದರು. ನಂತರ ಅರಣ್ಯ ಇಲಾಖೆಯವರು ತಿಳಿಸಿದ್ದಾರೆ ಎಂದು ಹೇಳಿ ಮೇಲೆ ಹೇಳಿದ ಎಸ್ಟೇಟಿನವರು ನಮ್ಮ ಸಂಘದ ವಾಹನಗಳನ್ನು ಅವರ ಖಾಸಗಿ ಮಾರ್ಗದಲ್ಲಿ ಚಲಿಸದಂತೆ ನಿಲ್ಲಿಸಿದ್ದರು. ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದ್ದ ಕಾರಣ ನಾನು ನಮ್ಮ ಸಂಘದ ವತಿಯಿಂದ ಅರಣ್ಯ ಇಲಾಖೆಯವರಿಗೆ ನಮ್ಮ ಸಂಘದವರಿಗೂ ಸಹ  ವಾಹನಗಳಲ್ಲಿ ಪ್ರವಾಸಿಗರನ್ನು ಜಲಪಾತಕ್ಕೆ ಕರೆದುಕೊಂಡು ಹೋಗುವಂತೆ ಅನುಮತಿ ಕೋರಿದ್ದೆವು. ಆದರೆ ನಮಗೆ ಕೂಡಲೇ ಅನುಮತಿ ಕೊಟ್ಟಿರಲಿಲ್ಲ, ಹಾಗಾಗಿ ನಾವು

ಹೋರಾಟ ಮಾಡುತ್ತಿದ್ದೆವು. ಅರಣ್ಯ ಇಲಾಖೆಯವರ ಅನುಮತಿಯನ್ನು ಪಡೆದು ಜಲಪಾತಕ್ಕೆ ಪ್ರವಾಸಿಗರನ್ನು ಕರೆದುಕೊಂಡು ಹೋಗುತ್ತಿದ್ದ ವ್ಯಕ್ತಿಗಳಿಗೆ ನಮ್ಮ ಸಂಘದವರು ವಾಹನಗಳಲ್ಲಿ ಪ್ರವಾಸಿಗರನ್ನು ಕರೆದುಕೊಂಡು ಹೋಗುವುದು ಇಷ್ಟವಿರಲಿಲ್ಲ. ಆ ಕಾರಣಕ್ಕೆ ಅವರು ನಮ್ಮನ್ನು ಹೇಗಾದರೂ ಮಾಡಿ ಹತ್ತಿಕ್ಕಬೇಕೆಂದು ಏನೇನೋ ಪ್ರಯತ್ನಗಳನ್ನು ಮಾಡುತ್ತಿದ್ದರು. ನಮ್ಮ ಮೇಲೆ ಅಪಪ್ರಚಾರ ಮಾಡುವುದು, ಬೆದರಿಕೆ ಹಾಕುವುದನ್ನು ಅವರು ಮಾಡುತ್ತಿದ್ದರು. ಸುಮಾರು 6 ತಿಂಗಳವರೆಗೂ ಅದೇ ರೀತಿ ನಡೆಯುತ್ತಿತ್ತು.

5. ಆದಾದ ಬಳಿಕ ನನ್ನ ಕ್ಲಿನಿಕ್‌ಗೆ ಬೆಂಕಿ ಬಿದ್ದಿತ್ತು. ಚಾಸಾ.11 ಅಬುಬ್ಬಕ್ಕರ್ ರವ ರು ನನಗೆ ಫೋನ್ ಮಾಡಿ ನನ್ನ ಕ್ಲಿನಿಕ್ ಗೆ ಬೆಂಕಿ ಬೀಳುವ ಪೂರ್ವದಲ್ಲಿ ಅದರ ಹಿಂದೆ ಪ್ರತಾಪ್, ಲೋಬೋ, ಶಬರೀಶ್, ಶರತ್ ಮತ್ತು ಕುಮಾರರವರು ಅನುಮಾನಸ್ಪದವಾಗಿ ಓಡಾಡುತ್ತಿದ್ದನ್ನು ನೋಡಿದ್ದಾಗಿ ತಿಳಿಸಿದರು. ಆ ರೀತಿ ಬೆಂಕಿ ಬಿದ್ದಿದ್ದರಿಂದ ನನ್ನ ಕ್ಲಿನಿಕ್ ನಲ್ಲಿದ್ದ ಔಷದಿ ಮಾತ್ರೆಗಳು ಸುಟ್ಟು ರೂ.2,00,000/- ನಷ್ಟ ಸಂಭವಿಸಿತ್ತು. ಆ ಸಮಯದಲ್ಲಿ ನನ್ನ ಅಗತ್ಯ ದಾಖಲೆಗಳು ಸಹ ಸುಟ್ಟು ಹೋಗಿದ್ದವು.

6. ನಾನು ನನ್ನ ಕ್ಲಿನಿಕ್ ಬಳಿ ಹೋಗುವಷ್ಟರಲ್ಲಿ ಲಿಂಗದಹಳ್ಳಿ ಪೊಲೀಸರು ಅಲ್ಲಿಗೆ ಬಂದಿದ್ದರು. ನಂತರ ನಾನು ಅದೇ ದಿನ ಅಂದರೆ ದಿಃ 02-04-2023 ರಂದು ರಾತ್ರಿ 12 ಗಂಟೆಗೆ ಲಿಂಗದಹಳ್ಳಿ ಪೊಲೀಸ್ ಠಾಣೆಗೆ ಹೋಗಿ ನನ್ನ ಕ್ಲಿನಿಕ್ ಗೆ ಬೆಂಕಿ ಬಿದ್ದ ಬಗ್ಗೆ ಮೇಲೆ ಹೇಳಿದ ಪ್ರತಾಪ್, ಲೋಬೋ, ಶಬರೀಶ್, ಶರತ್, ಕುಮಾರ ಮತ್ತು ಮಹೇಂದ್ರ ಎಂಬುವವರ ವಿರುದ್ಧ ಅನುಮಾನವನ್ನು ವ್ಯಕ್ತ ಪಡಿಸಿ

ಅವರ ವಿರುದ್ಧ ಕ್ರಮ ಜರುಗಿಸುವಂತೆ ದೂರನ್ನು ಕೊಟ್ಟೆನು. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ದೂರನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಲಾಗಿ ಅದರ ಕಲಂ.12 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ವರದಿಯನ್ನು ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು.

7. ದೂರು ಕೊಟ್ಟ ಮಾರನೆ ದಿನ ಬೆಳಿಗ್ಗೆ 9 ಗಂಟೆಗೆ ಲಿಂಗದಹಳ್ಳಿ ಪೊಲೀಸರು ಬಳ್ಳಾವರದಲ್ಲಿರುವ ನನ್ನ ಕ್ಲಿನಿಕ್ ಬಳಿ ಮಹಜರ್ ಜರುಗಿಸಲು ಬಂದಿದ್ದರು. ಆ ಸಮಯದಲ್ಲಿ ನಾನು ಹಾಜರಿದ್ದೆನು ಮತ್ತು ನನ್ನೊಂದಿಗೆ ಚಾಸಾ.2 ವಿಜಯಕುಮಾರ್ ಮತ್ತು ಚಾಸಾ.3 ಜಸ್ವಂತ್‌ರವರು ಹಾಜರಿದ್ದರು. ಅವರ ಸಮಕ್ಷಮ ನಾನು ಪೊಲೀಸರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿದೆನು.

8. ನನ್ನ ಕ್ಲಿನಿಕ್ ನ ಕಿಟಕಿಯ ಗಾಜು ಒಡೆದಿತ್ತು, ಅದರ 3 ಚೂರುಗಳನ್ನು ಪೊಲೀಸರು ಅಮಾನತು ಪಡಿಸಿಕೊಂಡರು. ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಕಿಟಕಿಯ ಒಡೆದ 3 ಗಾಜಿನ ಚೂರುಗಳನ್ನು ಒಟ್ಟಾಗಿ ಮು.ಮಾ.1 ಎಂದು ಗುರುತಿಸಲಾಯಿತು. ಬೆಂಕಿಯನ್ನು ಆರಿಸಲು ಹಾಕಿದ್ದ ನೀರು ನನ್ನ ಕ್ಲಿನಿಕ್ ಒಳಗೆ ನೆಲದ ಮೇಲೆ ಬಿದ್ದಿತ್ತು, ಅದನ್ನು ಪೊಲೀಸರು ಪ್ಲಾಸ್ಟಿಕ್ ಬಾಟಲಿಯಲ್ಲಿ ಸಂಗ್ರಹಿಸಿ ಅಮಾನತು ಪಡಿಸಿಕೊಂಡರು. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಸ್ವಲ್ಪ ನೀರುವ ಇರುವ ಒಂದು ಪ್ಲಾಸ್ಟಿಕ್ ಬಾಟಲಿಯನ್ನು ಮು.ಮಾ.2 ಎಂದು ಗುರುತಿಸಲಾಯಿತು. ನಾನು

ಔಷದಿಗಳನ್ನು ಜೋಡಿಸಿದ್ದ ಕಬ್ಬಿಣದ rack ಸುಟ್ಟು ಹೋಗಿದ್ದು, ಅದರ ಮೇಲ್ಭಾಗವನ್ನು ಪೊಲೀಸರು 4 ಹತ್ತಿಯ ತುಂಡುಗಳಿಂದ ಒರೆಸಿ ಸಂಗ್ರಹಿಸಿಕೊಂಡರು. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಕಬ್ಬಿಣದ rack ನ ಮೇಲ್ಭಾಗದಲ್ಲಿ ಸುಟ್ಟ ಭಾಗದಿಂದ ಸಂಗ್ರಹಿಸಿದ 4 ಹತ್ತಿಯ ತುಂಡುಗಳನ್ನು ಒಟ್ಟಾಗಿ ಮು.ಮಾ.3 ಎಂದು ಗುರುತಿಸಲಾಯಿತು. ಮೇಲೆ ಹೇಳಿದ ಕಬ್ಬಿಣದ rack ನ ಸುಟ್ಟಿದ್ದ ಕೆಳಭಾಗವನ್ನು ಸಹ ಪೊಲೀಸರು 4 ಹತ್ತಿಯ ತುಂಡುಗಳಿಂದ ಒರೆಸಿ ಸಂಗ್ರಹಿಸಿಕೊಂಡರು. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಕಬ್ಬಿಣದ rack ನ ಕೆಳಭಾಗದಲ್ಲಿ ಸುಟ್ಟ ಭಾಗದಿಂದ ಸಂಗ್ರಹಿಸಿದ 2 ಹತ್ತಿಯ ತುಂಡುಗಳನ್ನು ಒಟ್ಟಾಗಿ ಮು.ಮಾ.4 ಎಂದು ಗುರುತಿಸಲಾಯಿತು.

9. ನನ್ನ ಕ್ಲಿನಿಕ್ ನಲ್ಲಿದ್ದ ಮಾತ್ರೆಗಳ ಒಂದು ಬಂಡಲ್ ಸುಟ್ಟು ಹೋಗಿತ್ತು, ಅದನ್ನು ಸಹ ಪೊಲೀಸರು ಅಮಾನತು ಪಡಿಸಿಕೊಂಡರು. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಸುಟ್ಟ ಮಾತ್ರೆಗಳ ಒಂದು ಬಂಡಲ್ ನ್ನು ಮು.ಮಾ.5 ಎಂದು ಗುರುತಿಸಲಾಯಿತು. ನನ್ನ ಕ್ಲಿನಿಕ್ ನಲ್ಲಿದ್ದ ಇಂಜೆಕ್ಷನ್ ಗಳ ಒಂದು ಬಂಡಲ್ ಸುಟ್ಟು ಹೋಗಿತ್ತು, ಅದನ್ನು ಸಹ ಪೊಲೀಸರು ಅಮಾನತು ಪಡಿಸಿಕೊಂಡರು. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಸುಟ್ಟ ಇಂಜೆಕ್ಷನ್ ಗಳ ಒಂದು ಬಂಡಲ್ ನ್ನು ಮು.ಮಾ.6 ಎಂದು ಗುರುತಿಸಲಾಯಿತು. Signature ಎಂದು ಬರೆದಿದ್ದ ಒಂದು ನೀರಿನ ಬಾಟಲಿನ ಕೆಳಭಾಗದಲ್ಲಿ ಸ್ವಲ್ಪ ಪೆಟ್ರೋಲ್ ಇತ್ತು, ಅದನ್ನು ಸಹ ಪೊಲೀಸರು ಅಮಾನತು ಪಡಿಸಿಕೊಂಡರು. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಕೆಳಭಾಗದಲ್ಲಿ ಸ್ವಲ್ಪ ಪೆಟ್ರೋಲ್

ಇರುವ Signature ಎಂದು ಬರೆದಿದ್ದ ಒಂದು ನೀರಿನ ಬಾಟಲಿಯನ್ನು ಮು.ಮಾ.7 ಎಂದು ಗುರುತಿಸಲಾಯಿತು.

(ಈ ದಿನ ಮುದ್ದೆ ಮಾಲು 1 ರಿಂದ 7 ಎಂದು ಗುರುತಿಸಲ್ಪಟ್ಟ ವಸ್ತುಗಳನ್ನು ಪ್ಯಾಕ್ ಮಾಡಿ ಎಫ್.ಎಸ್.ಎಲ್ ಸೀಲು ಮಾಡಲಾಗಿದ್ದು, ಅವುಗಳನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ಆರೋಪಿ, ಆತನ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿರುತ್ತದೆ.)

(ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರವರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ